ಕರ್ನಾಟಕ ಸರ್ಕಾರ

# ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ

(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)

Government of Karnataka

# Karnataka Residential Educational Institutions Society

(An Organisation of Govt. of Karnataka)

## ನೇಮಕಾತಿ ಪ್ರಾಧಿಕಾರಿ ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು

ನಂ.8, ಎಂ.ಎಸ್.ಬಿ.-1 ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು-52, ದೂರವಾಣಿ ಸಂಖ್ಯೆ: 080-22265755,
ಇ-ಮೇಲ್: edkreis@rediff.com

## ನೇಮಕಾತಿ ಆದೇಶ- "ಕನ್ನಡ ಭಾಷಾ ಉಪನ್ಯಾಸಕರು"

**ವಿಷಯ:** ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿರುವ ವಸತಿ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳ ನೇರ ನೇಮಕಾತಿಯಲ್ಲಿ ಆಯ್ಕೆಯಾದ ಗ್ರೂಪ್-ಎ, ಬಿ ಮತ್ತು ಸಿ ವೃಂದದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಬಗ್ಗೆ.

**ಉಲ್ಲೇಖ:**

1. ಕರ್ನಾಟಕ ಲೋಕ ಸೇವಾ ಆಯೋಗದ ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ-01/ಆರ್‌ಬಿ 04/ ಬಿ 3/2016 ದಿನಾಂಕ:03.11.2016.
2. ಕರ್ನಾಟಕ ಲೋಕ ಸೇವಾ ಆಯೋಗವು ಹೊರಡಿಸಿದ ಅಂತಿಮ ಆಯ್ಕೆ ದಿನಾಂಕ:13.04.2018.
3. ಸರ್ಕಾರದ ಪತ್ರ ಸಂಖ್ಯೆ; ಸಕಇ 453 ಮೊದೇಶಾ 2018 ದಿನಾಂಕ:14.08.2018.

*****

**ಪ್ರಸ್ತಾವನೆ:-**

ಉಲ್ಲೇಖ (1) ರಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿರುವ ವಸತಿ ಕಾಲೇಜುಗಳಲ್ಲಿ ಖಾಲಿ ಇರುವ ಗ್ರೂಪ್-ಎ, ಬಿ ಮತ್ತು ಸಿ ವೃಂದದ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಕೆ.ಪಿ.ಎಸ್.ಸಿ. ಮೂಲಕ ಅಧಿಸೂಚನೆ ಹೊರಡಿಸಲಾಗಿದ್ದು, ಅದರಂತೆ, ಉಲ್ಲೇಖ (2) ರಲ್ಲಿ ಅಂತಿಮ ಆಯ್ಕೆ ಪಟ್ಟಿಯನ್ನು ಲೋಕ ಸೇವಾ ಆಯೋಗದವರು ಪ್ರಕಟಿಸಿರುತ್ತಾರೆ. ಉಲ್ಲೇಖ (3) ರ ಸರ್ಕಾರದ ನಿರ್ದೇಶನದಂತೆ ದಿನಾಂಕ:03.09.2018ರಂದು ಕೌನ್ಸಲಿಂಗ್ ಮೂಲಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿ ಬರುವ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳಲ್ಲಿ ಖಾಲಿ ಇರುವ "ಕನ್ನಡ ಭಾಷಾ ಉಪನ್ಯಾಸಕರ" ಹುದ್ದೆಗೆ ಆಯ್ಕೆ ಮಾಡಿ ಸ್ಥಳನಿಯುಕ್ತಿಗೊಳಿಸಲು ಕ್ರಮವಹಿಸಲಾಗಿದೆ. ಅದರಂತೆ ಆಯ್ಕೆ ಪಟ್ಟಿಯ ಪ್ರಕಾರ ನೇಮಕಾತಿಗೆ ಸಂಬಂಧಿಸಿದಂತೆ, ಜಾತಿ ಸಿಂಧುತ್ವ, ಪೊಲೀಸ್ ವರದಿ, ವೈದ್ಯಕೀಯ ಪ್ರಮಾಣ ಪತ್ರಗಳು ಮತ್ತು ಅಂಕ ಪಟ್ಟಿಗಳ ನೈಜತೆ ಪ್ರಮಾಣ ಪತ್ರಗಳು



8, ಎಂ.ಎಸ್.ಬಿ-1, 6 & 7ನೇ ಮಹಡಿ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು-560 052. ದೂರವಾಣಿ: 080-22283366, 22265755, 22204466, 22207722, ಟೆಲಿಫ್ಯಾಕ್ಸ್: 080-22262288
#8, M.S.B.-1, 6th & 7th Floor, Cunningham Road, Bengaluru - 560052. Phone: 080-22283366, 22265755, 22204466, 22207722, Telefax: 080-22262288.
E-mail: edkreis@rediff.com, Website: www.kreis.kar.nic.in

ಸ್ವೀಕೃತವಾಗಿದ್ದು, ಈ ಮುಂದೆ ತಿಳಿಸಿದ ನಿಬಂಧನೆಗೊಳಪಟ್ಟು ನೇಮಕಾತಿ ಆದೇಶ ನೀಡಿ, ಸ್ಥಳ ನಿಯುಕ್ತಿಗೊಳಿಸಲು ಈ ಕೆಳಕಂಡ ಆದೇಶ.

## :: ಆದೇಶ ::

ಸಂಖ್ಯೆ: ಕವಶಿಸಸ/ಆಡಳಿತ/ನೇಮಕಾತಿ/ಸಿಆರ್-7/2015-16 ದಿನಾಂಕ: 25.10.2018

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿರುವ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜುಗಳಲ್ಲಿ ಖಾಲಿ ಇರುವ ಗ್ರೂಪ್-ಎ, ಬಿ ಮತ್ತು ಸಿ ವೃಂದದ ಹುದ್ದೆಗಳಿಗೆ ನೇರ ನೇಮಕಾತಿಯಲ್ಲಿ ಆಯ್ಕೆಗೊಂಡ ಈ ಕೆಳಕಂಡ ಅಭ್ಯರ್ಥಿಯ ಹೆಸರಿನ ಮುಂದೆ ಸೂಚಿಸಿರುವಂತೆ ತಕ್ಷಣದಿಂದಲೇ ಜಾರಿಗೆ ಬರುವಂತೆ **ಗ್ರೂಪ್-ಬಿ** ವೃಂದದ ಕನ್ನಡ ಭಾಷಾ ಉಪನ್ಯಾಸಕರ ಹುದ್ದೆಗೆ ನೇಮಕಾತಿ ಮಾಡಿ ಸ್ಥಳನಿಯುಕ್ತಿಗೊಳಿಸಿ ಆದೇಶಿಸಿದೆ.

### ಕನ್ನಡ ಭಾಷಾ ಉಪನ್ಯಾಸಕರು.

**ವೇತನ ಶ್ರೇಣಿ** (22800-600-24600-700-28800-800-33600-900-39000-1050-43200)

| ಕ್ರ.ಸ. | ಅಭ್ಯರ್ಥಿಯ ಹೆಸರು ಮತ್ತು ವಿಳಾಸ (ಶ್ರೀ/ಶ್ರೀಮತಿ/ಕು.) | ನೋಂದಣಿ ಸಂಖ್ಯೆ | ಆಯ್ಕೆಯಾದ ಪ್ರವರ್ಗ | ನಿಯುಕ್ತಿಗೊಳಿಸಿದ ವಸತಿ ಕಾಲೇಜು |
|---|---|---|---|---|
| 1 | ಕುಮಾರ ಎಸ್. ಬಿನ್ ಶಿವಲಿಂಗೆ ಗೌಡ ಹೆಚ್. ಬಸವಪುರ ಗ್ರಾಮ, ಹಲಗೂರು ಹೋಬಳಿ ಮತ್ತು ಅಂಚೆ ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ-571421 | 3403214 | ಸಾಮಾನ್ಯ/ 3-ಎ/ ಗ್ರಾಮೀಣ | 916-ಪ.ಜಾತಿ-ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು, ವರಕೋಡು, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ |

### ಈ ನೇಮಕಾತಿಯು ಕೆಳಕಾಣಿಸಿರುವ ಷರತ್ತುಗಳಿಗೆ ಒಳಪಟ್ಟಿರುತ್ತದೆ.

1. ನೇಮಕಾತಿಯಾದ ಅಭ್ಯರ್ಥಿಯು ಸ್ಥಳನಿಯುಕ್ತಿಗೊಳಿಸಿದ ಸ್ಥಳದಲ್ಲಿ, ಆದೇಶ ತಲುಪಿದ 15 ದಿನಗಳೊಳಗಾಗಿ ಸಂಬಂಧಿಸಿದ ವಸತಿ ಕಾಲೇಜಿನ ಪ್ರಾಂಶುಪಾಲರ ಕಛೇರಿಯಲ್ಲಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು. ಇಲ್ಲವಾದಲ್ಲಿ ಈ ಆದೇಶ ತಂತಾನೇ ರದ್ದುಗೊಳ್ಳುತ್ತದೆ.
2. ಈ ನೇಮಕಾತಿ ಆದೇಶವು ಭವಿಷ್ಯದಲ್ಲಿ ಬರಬಹುದಾದ ಮಾನ್ಯ ನ್ಯಾಯಾಲಯಗಳ ತೀರ್ಪುಗಳು ಹಾಗೂ ಸರ್ಕಾರದ ತೀರ್ಮಾನಗಳಿಗೆ ಒಳಪಟ್ಟಿರುತ್ತದೆ.

3. ಈ ನೇಮಕಾತಿ ಆದೇಶವನ್ನು ಪಡೆಯುವ ಮೊದಲು ಅಭ್ಯರ್ಥಿಯು ತಾನು ಒದಗಿಸಿರುವ ಮಾಹಿತಿಗಳು ಸತ್ಯವೆಂದು Affidavit ಸಲ್ಲಿಸತಕ್ಕದ್ದು. ಒಂದು ವೇಳೆ ಒದಗಿಸಿದ ಮಾಹಿತಿಗಳು ಭವಿಷ್ಯದಲ್ಲಿ ಕೃತ್ರಿಮ ಅಥವಾ ತಪ್ಪು ಎಂದು ಕಂಡುಬಂದಲ್ಲಿ ಈ ನೇಮಕಾತಿಯನ್ನು ರದ್ದುಪಡಿಸಲಾಗುವುದು. ಅಂತಹ ತಪ್ಪುಗಳಿಗೆ ಅಭ್ಯರ್ಥಿಯೇ ಸಂಪೂರ್ಣ ಹೊಣೆಗಾರರಾಗಿರುತ್ತಾರೆ.
4. ಅಭ್ಯರ್ಥಿಯು 2 ವರ್ಷಗಳ ಖಾಯಂಪೂರ್ವ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸತಕ್ಕದ್ದು, ಈ ಖಾಯಂ ಪೂರ್ವ ಸೇವಾ ಅವಧಿಯು ಪೂರ್ಣಗೊಳ್ಳುವ ಒಳಗಾಗಿ ಹುದ್ದೆಗೆ ನಿಗದಿಪಡಿಸಿದ ಇಲಾಖಾ ಪರೀಕ್ಷೆಗಳನ್ನು ಕಡ್ಡಾಯವಾಗಿ ತೇರ್ಗಡೆಯಾಗತಕ್ಕದ್ದು.
5. ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾಗುವ ಸಂದರ್ಭದಲ್ಲಿ, ವಿದ್ಯಾರ್ಹತೆ ಬಗ್ಗೆ ಎಲ್ಲಾ ದಾಖಲಾತಿಗಳ (ಎಸ್.ಎಸ್.ಎಲ್.ಸಿ., ದ್ವಿತೀಯ ಪಿ.ಯು.ಸಿ., ಪದವಿ, ಬಿ.ಇಡಿ, ಸ್ನಾತಕೋತ್ತರ ಪದವಿ ಇತ್ಯಾದಿ) ಹಾಗೂ ಜನ್ಮ ದಿನಾಂಕ ದೃಢಪಡಿಸುವ ಬಗ್ಗೆ ಅಧಿಕೃತ ದಾಖಲಾತಿಗಳ (ಎಸ್.ಎಸ್.ಎಲ್.ಸಿ. ಅಂಕಪಟ್ಟಿ) ಎರಡು ಸೆಟ್ ಜೆರಾಕ್ಸ್ ಪ್ರತಿಗಳನ್ನು ಸಲ್ಲಿಸತಕ್ಕದ್ದು.
6. ಒಬ್ಬರಿಗಿಂತ ಹೆಚ್ಚು ಪತ್ನಿ/ಪತಿಯವರನ್ನು ಹೊಂದಿರುವುದಿಲ್ಲ ಎಂಬ ಬಗ್ಗೆ ಮುಚ್ಚಳಿಕೆ ಪತ್ರ ನೀಡುವುದು.

ಡಾ. ನಂದನ್ ಕುಮಾರ್ ಜೆ.ವಿ.
ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ
ಬೆಂಗಳೂರು.

Executive Director
Karnataka Residential Educational Institutions Society
BANGALORE.

<u>ಪ್ರತಿಯನ್ನು ಮಾಹಿತಿಗಾಗಿ:-</u>

1. ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿರವರಿಗೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ,
3. ಸರ್ಕಾರದ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ.
4. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ,
5. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ.
6. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ,
7. ಎಲ್ಲಾ ಜಿಲ್ಲಾ ಜಂಟಿ ನಿರ್ದೇಶಕರು/ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರವರಿಗೆ,
8. ಎಲ್ಲಾ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರಿಗೆ
9. ಎಲ್ಲಾ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು/ಯೋಜನಾ ಸಮನ್ವಯಾಧಿಕಾರಿಗಳು ರವರಿಗೆ.

10. ಸಂಬಂಧಪಟ್ಟ ವಸತಿ ಕಾಲೇಜಿನ ಪ್ರಾಂಶುಪಾಲರಿಗೆ.
11. ಸಂಬಂಧಿಸಿದ ಅಭ್ಯರ್ಥಿಗಳಿಗೆ.
12. ಕಛೇರಿ ಪ್ರತಿ.